

# ಶೂಟಿಂಗ್ ಸೆಟ್‌ನಲ್ಲಿ ಜಾಲಿಬಾಯ್ ಅಂಬಿ



**ಅಂಬರೀಷ್ ಅವರ ವರ್ಣರಂಜಿತ ವ್ಯಕ್ತಿತ್ವವನ್ನು ಬಣ್ಣಿಸುವ ಹಲವು ಕತೆಗಳು ಚಾಲ್ತಿಯಲ್ಲಿವೆ. ಅಂಬರೀಷ್‌ರ ಹಲವಾರು ಚಿತ್ರಗಳಿಗೆ ಸ್ಥಿರಚಿತ್ರ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸಿರುವ ಸ್ಥಿರಚಿತ್ರ ಛಾಯಾಗ್ರಾಹಕ ಪ್ರಗತಿ ಅಶ್ವತ್ಥ ನಾರಾಯಣ ತಾವು ಕಂಡ ಅಂಬರೀಷರನ್ನು ಅವರಿಲ್ಲಿ ಆತ್ಮೀಯವಾಗಿ ಸ್ಮರಿಸಿಕೊಂಡಿದ್ದಾರೆ.**

■ **ನಿರೂಪಣೆ: ಶಶಿಧರ ಚಿತ್ರದುರ್ಗ,**
ಚಿತ್ರಗಳು: ಪ್ರಗತಿ ಅಶ್ವತ್ಥ ನಾರಾಯಣ

### ಸಂಕ್ರಾಂತಿ ದಿನ ಫೋಟೊ ಸೆಷನ್

ಅದು 1978ರ ಸಂಕ್ರಾಂತಿ ಹಬ್ಬ. ನಮ್ಮ 'ಪ್ರಗತಿ ಫೋಟೋ ಸ್ಟುಡಿಯೋ'ಗೆ ರಜೆ. ಹಿಂದಿನ ವರ್ಷವೇ ನನ್ನ ವಿವಾಹವಾಗಿತ್ತು. ಅದು ನಮಗೆ ಮದುವೆ ನಂತರದ ಮೊದಲ ಸಂಕ್ರಾಂತಿ. ಆಗ ನಮ್ಮ ಮನೆ ಇದ್ದುದು ಶ್ರೀರಾಂಪುರದಿಂದ ಮುಂದೆ ಇರುವ ಮರಿಯಪ್ಪನ ಪಾಳ್ಯದಲ್ಲಿ. ಹಬ್ಬದ ಸಂಭ್ರಮದಲ್ಲಿದ್ದಾಗ ಬೆಳಗ್ಗೆ ಮನೆಯ ಬಳಿ ಒಂದು ಶೂಟಿಂಗ್ ಕಾರು ಬಂದು ನಿಂತಿತು. 'ಅಂಬರೀಷ್ ಅವರಿಗೆಗೆ ಅರ್ಜೆಂಟಾಗಿ ಪಾಸ್‌ಪೋರ್ಟ್ ಫೋಟೋ ಬೇಕಂತೆ. ನೀವು ಈ ಕೂಡಲೇ ಬಂದು ತೆಗೆದುಕೊಡಿ' ಎಂದ ಡ್ರೈವರ್. ಮನೆಯಲ್ಲಿ ಹಬ್ಬ. ಅದು ಮೂರ್‍ನಾಲ್ಕು ಗಂಟೆ ಕೆಲಸ. 'ಇವತ್ತು ಆಗೋಲ್ಲ' ಎಂದು ಹೇಳಿ ಕಳುಹಿಸಿದೆ.

ಇದಾಗಿ ಒಂದು ಗಂಟೆಗೆ ಮತ್ತೆ ಅದೇ ಕಾರು ಮನೆ ಬಾಗಿಲಿಗೆ ಬಂದು ನಿಂತಿತು. ಈ ಬಾರಿ ಸ್ವತಃ ಅಂಬರೀಷ್ ಬಂದಿದ್ದರು! 'ರೀ ಅಶ್ವತ್ಥ್ ಬನ್ನಿ ಫೋಟೋ ತೆಗೆದುಕೊಡಿ. ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್‌ಗೆ ಅಪ್ಲೈ ಮಾಡ್ಬೇಕು, ಅರ್ಜೆಂಟಿದೆ' ಎಂದರು. ಅವರಿಗೆ ಎದುರಾಡಲು ಸಾಧ್ಯವಿಲ್ಲ ಎನ್ನುವುದು ಗೊತ್ತಿತ್ತು. ಮರುಮಾತನಾಡದೆ ಕಾರು ಹತ್ತಿದೆ. ಗಾಂಧಿನಗರದಲ್ಲಿದ್ದ ಸ್ಟುಡಿಯೋ ಬಾಗಿಲು ತೆರೆದು ಅಂಬರೀಷ್‌ರ ಫೋಟೋ ಕ್ಲಿಕ್ಕಿಸಿ, ಡೆವಲಪ್ ಮಾಡಿ ಒಣಗಿಸಿದೆ. ಎರಡು ಗಂಟೆಗಳ ಕಾಲ ಅಂಬರೀಷ್ ಸ್ಟುಡಿಯೋದಲ್ಲೇ ಕುಳಿತಿದ್ದರು. ಪ್ರೀತಿಯಿಂದ ಗದರಿಯಾದರೂ ತಮ್ಮ ಕೆಲಸ ಮಾಡಿಕೊಳ್ಳುವ ವ್ಯಕ್ತಿ ಅವರು. ಥ್ಯಾಂಕ್ಸ್ ಹೇಳಿ ನನ್ನನ್ನು ಕಾರಿನಲ್ಲಿ